# ನಮಿಸಿ ಬೇಡುವೆ ವರಗಳ ನಿನ್ನ

ನಮಿಸಿ ಬೇಡುವೆ ವರಗಳ ನಿನ್ನ
ಸಂಯಮಿ ಕುಲೋತ್ತಮ ರಾಘವೇಂದ್ರ ರನ್ನ || ಪ ||

ವಿಮಲ ಸುಮತಿ ಜನರತಿಪ್ರೀಯಾ – ಪಾದ
ಕಮಲಗಳಿಗೆರಗುವೆನೊ ಜೀಯಾ
ಶಮಲ ಮಾರ್ಗದಲಿ ನೀ ನೀಯದಿರೊ ಮತಿಯ
ಅಮಿತ ಕರುಣದಿ ಪಿಡಿಯೋ ಕೈಯ್ಯ || ೧ ||

ಕಂಡಕಂಡವರನು ಬೇಡಿ ನೊಂದೆ ಕ
ಮಂಡಲು ದಂಡಧಾರಿ ನೀ ಗತಿಯೆಂದೆ
ಪಂಡಿತಾಗ್ರಗಣ್ಯ ಇನ್ಯಾರು ಮುಂದೆ ಕೋ
ದಂಡಪಾಣಿಯ ಪಾದ ತೋರಿಸು ತಂದೆ || ೨ ||

ಶ್ರೀ ಸುಧೀಂದ್ರ ಯತಿಕರಕಂಜಜಾತ ತುಂ
ಗಾಸುನದಿನಿಲಯಾ ಅಘಾಂಬುಧಿ ಪೋತ
ವಾಸುಕಿಶಯನ **ಜಗನ್ನಾಥ ವಿಠ್ಠಲ**
ದಾಸರ ಪೋಷಕ ಲಾಲಿಸಿ ಪೋತಾ || ೩ ||